ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆದರೆ ಈ ನೊಣಗಳು ನಮ್ಮ ಪರಿಸರಕ್ಕೆ ಹೊಂದಿಕೊಳ್ಳುವುದೇ ಇಲ್ಲವೇ ಎನ್ನುವುದರ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಕೇಂದ್ರ ಸರ್ಕಾರದಿಂದ ಖಾದಿ ಆಯೋಗದ ಮೂಲಕ ಕಾಯಿಲೆ ನಿಯಂತ್ರಣ ಪ್ರಯತ್ನಗಳು ನಡೆಯುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯಲು ಕೋರಲಾಗುವುದು.

(4) ಅರಣ್ಯ ಇಲಾಖೆಯ ಗಾರ್ಡ್‌ಸ್ ಸಿಬ್ಬಂದಿಗಳ ವರ್ಗಾವಣೆ.

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, ರಾತ್ರಿ –ಹಗಲು ಕೆಲಸ ಮಾಡಿ ಜನರ ಕಷ್ಟವನ್ನು ನೋಡುತ್ತಿರುವ ಅರಣ್ಯ ಸಿಬ್ಬಂದಿ ವರ್ಗದವರಿಗೆ ಸವಲತ್ತು ನೀಡಬೇಕಾದುದು ಅತಿ ಅವಶ್ಯಕವಾಗಿರುತ್ತದೆ. ಅದೇ ವರ್ಗದ ಸಿಬ್ಬಂದಿಯವರಿಗೆ ಬೇರೆ ಬೇರೆ ಇಲಾಖೆಯಲ್ಲಿದ್ದರೆ ಸಮಾನ ಸವಲತ್ತು ಸಿಗುತ್ತಿತ್ತು. ಇಲ್ಲಿ ಅಪಾರವಾದ ತಾರತಮ್ಯವಾಗಿದೆ. ಕೊಡಗು ಜಿಲ್ಲೆಯಲ್ಲಿ ಬಾರ್ಡರ್ ಸೆಕ್ಯೂರಿಟಿ ರಿಸರ್ವ್ ಪೋಲೀಸರನ್ನು ತಿಂಗಳಿಗೊಮ್ಮೆ ಬದಲಾಯಿಸಿ ಟಿ.ಎ., ಡಿ.ಎ.ಗಳನ್ನು ಮುಂಗಡ ನೀಡಲಾಗುತ್ತಿದೆ. ಆದೇ ಅರಣ್ಯ ಇಲಾಖೆಯ ಗಾರ್ಡ್‌ಗಳಿಗೆ 3–4 ವರ್ಷಗಳಿಂದ ವರ್ಗಾವಣೆ ಇರುವುದಿಲ್ಲ. ಟಿ.ಎ., ಡಿ.ಎ., ಸಹ ಇರುವುದಿಲ್ಲ. ಯಾಗ ಪ್ರಭಾವಕ್ಕೂ ಒಳಗಾಗದ, ಎಲ್ಲಾ ಕಷ್ಟಗಳನ್ನು ಅನುಭವಿಸುವ ಗಾರ್ಡ್‌ಗಳಿಗೆ ಆರು ತಿಂಗಳಿಗೊಮ್ಮೆಯಾದರೂ ವರ್ಗಾವಣೆ ಮತ್ತು ಟಿ.ಎ., ಡಿ.ಎ., ನೀಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಅರಣ್ಯ ರಕ್ಷಕರನ್ನು, ವಿಭಾಗ ಮಟ್ಟದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಅರಣ್ಯ ಸಂರಕ್ಷಣಾಧಿಕಾರಿಗಳು ವೃತ್ತಮಟ್ಟದಲ್ಲಿ ಅವರ ವೃತ್ತದ ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೂ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಒಂದು ವೃತ್ತದಿಂದ ಮತ್ತೊಂದು ವೃತ್ತಕ್ಕೆ ವರ್ಗಾವಣೆ ಮಾಡಲು ಅಧಿಕಾರ ಹೊಂದಿರುತ್ತಾರೆ. ಸರ್ಕಾರದ ಹಿತ ದೃಷ್ಟಿಯಿಂದ ವರ್ಗಾವಣೆಯಾದ ಅರಣ್ಯ ರಕ್ಷಕರಿಗೆ ಕರ್ನಾಟಕ ಸೇವಾ ನಿಯಮದ ಪ್ರಕಾರ ಅವರು ರೂ. 400–00 ವರ್ಗಾವಣೆ ಅಸುಧಾನ. ಅವರು ಮತ್ತು ಅವರ ಕುಟುಂಬದವರಿಗೆ ಪ್ರಯಾಣದ ಖರ್ಚು ಮತ್ತು ಅವರ ಸ್ವಂತ ಸಾಮಾಗ್ರಿಗಳನ್ನು ವರ್ಗಾವಣೆಯಾದ ಸ್ಥಳಕ್ಕೆ ಸಾಗಿಸಲು 1500 ಕಿ.ಜಿ.ಮಿತಿವರೆಗೆ ತಗಲುವ ವೆಚ್ಚವನ್ನು ನೀಡಲಾಗುತ್ತಿದೆ. ಸ್ವಂತ ಸಾಮಾಗ್ರಿಗಳನ್ನು ಸಾಗಿಸಲು ಪ್ರತೀ ಕಿ.ಮೀ.ಗೆ 1500 ಕಿ.ಜಿ.ಗೆ ರೂ. 1.50 ರೋಡ್ ಮೈಲೇಜನ್ನು ಅಥವಾ ರೈಲಿನಲ್ಲಿ ಸಾಗಿಸಿದರೆ ರೈಲ್ವೆ ವೆಚ್ಚವನ್ನು ನೀಡಲಾಗುತ್ತದೆ. ಈ ವರ್ಗಾವಣೆ ವೆಚ್ಚವನ್ನು ಭರಿಸಲು ಎಲ್ಲಾ ವಿಭಾಗಗಳಿಗೆ, ಅನುದಾನವನ್ನು ನೀಡಲಾಗಿದೆ. ಈ ವಿಷಯದ ಬಗ್ಗೆ ಸದ್ಯದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ, ಯಾವುದೆ ಸಮಸ್ಯೆ ಉದ್ಭವಿಸಿದಲ್ಲಿ ಅದನ್ನು ನಿವಾರಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಅರಣ್ಯ ರಕ್ಷಕರುಗಳಿಗೆ ನಿಗದಿತ ಪ್ರಯಾಣ ವೆಚ್ಚವನ್ನು (ಫಿಕ್ಸ್‌ಡ್ ಟ್ರಾವಲಿಂಗ್ ಅಲೊಯನ್ಸ್) ನೀಡಲಾಗುತ್ತಿಲ್ಲ. ಅವರು ಕೇಂದ್ರ ಸ್ಥಾನದಿಂದ ಕರ್ತವ್ಯದ ಮೇಲೆ 8 ಕಿ.ಮೀ. ಮೇಲೆ ಹೊರಗೆ ಹೋದಾಗ ಮೇಲೆ ಹೇಳಿದ ನಿಯಮದಂತೆ ಪ್ರಯಾಣ ವೆಚ್ಚವನ್ನು ಹಾಗೂ ಅವರಿಗೆ ಭತ್ಯೆ ಪ್ರತಿ 24 ಗಂಟೆಗಳ ತಂಗುವಿಕೆ ರೂ. 25.00ಗಳನ್ನು ನೀಡಲಾಗುತ್ತಿದೆ. ಅವರು ಕಾಲು ನಡುಗೆಯಲ್ಲಿ ಪ್ರಯಾಣ ಮಾಡಿದರೂ ಕೂಡ ನಿಗದಿತ ದರದಲ್ಲಿ ಭತ್ಯೆ ನೀಡಲಾಗುವುದು. ವರ್ಗಾವಣೆಯಾದಾಗ ಅರಣ್ಯ ರಕ್ಷಕರು ತಮ್ಮ ಕ್ಷೇಮವನ್ನು ಉಪಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಿದ ನಂತರವೇ ಪಾವತಿ ಮಾಡಲಾಗುವುದು.

ಕೋರಿಕೆಯ ಮೇಲೆ ವರ್ಗಾವಣೆಯಾದ ಅರಣ್ಯ ರಕ್ಷಕರುಗಳಿಗೆ, ಯಾವುದೇ ವರ್ಗಾವಣೆ ಭತ್ಯೆ ಮತ್ತು ಅನುದಾನ ನೀಡಲಾಗುವುದಿಲ್ಲ.

(5) ಬೆಳಗಾಂ ತಾಲ್ಲೂಕು ನೀಲಜಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಪ್ರಾರಂಭ ಮಾಡುವ ಬಗ್ಗೆ.

Sri. K. C. Modgekar Desai (Hirebagewadi):– The Zilla Parishad, Belgaum and the Taluka Panchayat Samithi, Belgaum, have long back resolved for opening of a new Rural Veterinary Dispensary at Nilaji, Taluka and District, Belgaum. I had raised this matter on the floor of the House and the Government had assured me that it would open new RVD at Nilaji. Accordingly, the Governmenmt sanctioned new RVD at Nilaji. However, nothing has been done so far in the matter. I would request the Government to make a Budgetary provision during the current year for opening of the new RVD at Nilaji, Taluka and District, Belgaum. The villagers have come forward to make available the land necessary for the establishment of a new RVD at Nilaji.

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ, ಬೆಳಗಾಂ ತಾಲ್ಲೂಕು, ನೀಲಜಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ಇನ್ನೂ ದೊರಕಿರುವುದಿಲ್ಲ. ಸದರಿ ಗ್ರಾಮಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು

(6) ರಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರ ಜಮೀನಿನ ಸಕ್ರಮ.

ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ರಾಜ್ಯ ಸರ್ಕಾರವು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ರೈತರುಗಳ ಜಮೀನನ್ನು ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯನ್ನು ಶಾಸಕರುಗಳ ಅಧ್ಯಕ್ಷತೆಯಲ್ಲಿ ನೇಮಿಸಿ ಕಾರ್ಯಾಚರಣೆ ಮಾಡುತ್ತಿರುವುದು ಸರಿಯಷ್ಟೆ. ಕೆಲವು ರೈತರುಗಳು ಬಹಳ ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುವ ಜಮೀನುಗಳು ಸರ್ಕಾರಿ ಕಡತದಲ್ಲಿ ರಸ್ತೆ, ಪರಂಪೋಕು, ಓಣಿ ಪರಂಪೋಕು, ಹಳ್ಳಿ ಪರಂಪೋಕು ಎಂದಿರುತ್ತದೆ. ಆದರೆ ಸದ್ಯನಿರುವ ಪರಿಸ್ಥಿತಿಯಂತೆ ಅಲ್ಲಿ ಹಳ್ಳವೂ ಇಲ್ಲಾ, ರಸ್ತೆಯೂ ಇಲ್ಲಾ, ಓಣಿಯೂ ಇಲ್ಲಾ. ಆ ಜಮೀನನ್ನು ಸಕ್ರಮಗೊಳಿಸಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಕೆಲವು ಅಧಿಕಾರಿಗಳು ಇದನ್ನು ಮಾಡಿದರೆ ಸರ್ಕಾರದ ಸೂಚನೆಗೆ ವಿರೋಧವಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಆ ಜಮೀನುಗಳನ್ನೇ ನಂಬಿ ಹತ್ತಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರುಗಳಿಗೆ ತೊಂದರೆಯಾಗುವುದಿಲ್ಲವೆ ? ಆದ್ದರಿಂದ ಸ್ಥಳ ತನಿಖೆ ಮಾಡಿ ಯಾರಿಗೂ ತೊಂದರೆಯಾಗದಿದ್ದರೆ, ಅಂಥ ಜಮೀನನ್ನು ಸಕ್ರಮಗೊಳಿಸಬಹುದೆಂದು ಸರ್ಕಾರ ಸುತ್ತೋಲೆ ಕಳುಹಿಸುವುದರಿಂದ ಅನೇಕ ಜನ ಹರಿಜನರಿಗೂ ಹಿಂದುಳಿದವರಿಗೂ ಅನುಕೂಲವಾಗುತ್ತದೆ. ಸರ್ಕಾರದ ಸೂಚನೆಯಂತೆ ಯಾರು ಬೈರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅವರುಗಳನ್ನು ಒಕ್ಕಲೆಬ್ಬಿಸಬಾರದು ಎಂದು ಇದೆ. ಇಂಥ ಪರಿಸ್ಥಿತಿಯಲ್ಲಿ